ದಿನಾಂಕ : 22.09.2025 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಎನ್.ಜಿ.ಪಿ. ವಕೀಲರಿಂದ,**

5. ಕೇಸ್ ಚಾಲ್ತಿಯಲ್ಲಿ ಇದ್ದಾಗ ನಾನು, ನನ್ನ ತಾಯಿ ಮತ್ತು ನನ್ನ ತಂಗಿ ವೇಣಿವಿರಾಪುರ ಗ್ರಾಮದ 2 ಎಕರೆ 31 ಸೆಂಟ್ಸ್ ಜಮೀನು, ಸರ್ವೇ ನಂಬರ್.258/2, 6 ಎಕರೆ ಜಮೀನು ಮತ್ತು ವೇಣಿವಿರಾಪುರದ 5 ವರೆ ಅಂಕಣದ ಮನೆ ಆಸ್ತಿಗಳು ದಾವೆಯಲ್ಲಿ ಸೇರಿಸುವುದಿಲ್ಲ ಎಂದು ಅರ್ಜಿ ಹಾಕಿರುತ್ತೇವೆ ಎಂದರೆ ಸರಿ. ವೇಣಿವಿರಾಪುರ ಗ್ರಾಮದ 2 ಎಕರೆ 31 ಸೆಂಟ್ಸ್ ಮತ್ತು ವೇಣಿವಿರಾಪುರ ಗ್ರಾಮದ 5 ವರೆ ಅಂಕಣದ ಮನೆ ನನ್ನ ತಾತನಿಗೆ ಮತ್ತು ನನ್ನ ಅಜ್ಜಿಗೆ ಸೇರಿದ ಆಸ್ತಿಗಳು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ಎರಡು ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ ಈ ಎರಡು ಆಸ್ತಿಗಳು ನಮಗೆ ಸಂಬಂಧಿಸಿದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿ ಮಾರಾಟ ಮಾಡಿದ ಆಸ್ತಿ ಸರ್ವೇ ನಂಬರ್.258/2 6 ಎಕರೆ ಜಮೀನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ರೀತಿಯಲ್ಲಿ ಮಾರಾಟ ಮಾಡಿರುತ್ತಾರೆ ಎಲ್ಲಾ ಆಸ್ತಿಗಳಲ್ಲಿ ನನಗೆ 1/8 ಭಾಗ ಬೇಕು ಎಂದು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಬಸವನಗೌಡ, ಶಣಮುಕ್ಕಪ್ಪ ಮತ್ತು ಗವಿಸಿದ್ದಪ್ಪರವರ ಆಸ್ತಿಗಳಲ್ಲಿ ನಾನು ಭಾಗ ಕೇಳುವುದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳಲ್ಲಿ ಭಾಗ ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

6. ಬಸವನಗೌಡ, ಶಣಮುಕ್ಕಪ್ಪ ಮತ್ತು ಗವಿಸಿದ್ದಪ್ಪರವರಿಗೆ ಸೇರಿದ ಎಲ್ಲಾ ಆಸ್ತಿಗಳು ಈಗ ಇರುವುದಿಲ್ಲ ಕೆಐಎಡಿಬಿ ರವರು ಅದನ್ನು Acquire ಮಾಡಿರುತ್ತಾರೆ ಎಂದರೆ ಸರಿ. ನಾಗೇಶಪ್ಪರವರ ಭೂಮಿ ಮಾತ್ರ ಕೆಐಎಡಿಬಿ ರವರು Acquire ಮಾಡಿರುವುದಿಲ್ಲ ಎಂದರೆ ಸರಿ. ಗವಿಸಿದ್ದಪ್ಪರವರ ಹೆಂಡತಿ ಶಿವಮ್ಮ/ಪ್ರತಿವಾದಿ ನಂಬರ್.1 ನನಗೆ 10 ಲಕ್ಷ ಮತ್ತು ನನ್ನ ತಂಗಿಗೆ/3 ನೇ ವಾದಿಗೆ 10 ಲಕ್ಷ ರೂಪಾಯಿ ಚೆಕ್ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ಸರಿ. ಬಸವನಗೌಡರವರು ನಿಮಗೆ 10 ಲಕ್ಷ ಮತ್ತು ನಿಮ್ಮ ತಂಗಿ/3 ನೇ ವಾದಿಗೆ 10 ಲಕ್ಷ ರೂಪಾಯಿ ಕೊಟ್ಟರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂಗಿಗೆ ಬಸವನಗೌಡ 10 ಲಕ್ಷ ರೂಪಾಯಿ ಕೊಟ್ಟಿಲ್ಲ ಗವಿಸಿದ್ದಪ್ಪರವರು ಕೊಟ್ಟಿದ್ದರು ನನಗೆ 10 ಲಕ್ಷ ರೂಪಾಯಿ ಬಸವನಗೌಡರವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಗವಿಸಿದ್ದಪ್ಪರವರು ಪಾರ್ವತಮ್ಮ/10 ನೇ ಪ್ರತಿವಾದಿರವರಿಗೆ 1 ಎಕರೆ ಜಮೀನು ಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ್.361 ರಲ್ಲಿ 1 ಎಕರೆ ಜಮೀನು ಪಾರ್ವತಮ್ಮರವರಿಗೆ ಗವಿಸಿದ್ದಪ್ಪ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಜಮೀನು ಕೂಡ ಸರ್ಕಾರದವರು ಸ್ವಾಧೀನ ಪಡೆದುಕೊಂಡು ಹಣವನ್ನು ಪಾರ್ವತಮ್ಮರವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾಗೇಶಪ್ಪರವರು ತಾಯ್ಯಮ್ಮ/ಪ್ರತಿವಾದಿ ನಂಬರ್. 9 ರವರಿಗೆ 12 ಲಕ್ಷ ರೂಪಾಯಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. ನಾಗೇಶಪ್ಪ/ಪ್ರತಿವಾದಿ ನಂಬರ್.7 ರ ಮದುವೆ ಆದ ತಕ್ಷಣ ಅವರು ಎಲ್ಲಾರು ಬೇರೆ ಬೇರೆ ಆಗಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಾಗೇಶಪ್ಪರವರ ಮದುವೆಗೆ ನಾನು

ಹೋಗಿದ್ದೆ. ನಾಗೇಶಪ್ಪರವರ ಮದುವೆ 1985 ರಲ್ಲಿ ಆಗಿದ್ದು ದಿನಾಂಕಃ 11.12.1987 ರಲ್ಲಿ ಅವರೆಲ್ಲಾರು ವಿಭಾಗ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 11.12.1987 ರ ವಿಭಾಗ ಪತ್ರ ಆಗುವಾಗ ನಾನು , ನನ್ನ ತಾಯಿ, ಸರಸ್ವತಿ, ಬಸವನಗೌಡ, ಶಣಮುಕ್ಕಪ್ಪ, ಗವಿಸಿದ್ದಪ್ಪ ಮತ್ತು ನಾಗೇಶಪ್ಪ ಎಲ್ಲಾರು ಇದ್ದೆವು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ, ಸರಸ್ವತಿ ಮತ್ತು ಈರಮ್ಮ ಎಲ್ಲಾರಿಗೂ ಕೂಡಿ 6 ಎಕರೆ ಜಮೀನು ವಿಭಾಗದಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮತ್ತು ಸರಸ್ವತಿರವರಿಗೆ ವಿಭಾಗ ಪತ್ರದಲ್ಲಿ ಸಹಿ ಮಾಡಲು ಹೇಳಿದಾಗ ನಮ್ಮ ತಾಯಿ ಯಜಮಾನ ಇರುವುದರಿಂದ ಅವರು ಒಬ್ಬರೇ ಮಾಡುತ್ತಾರೆ ಎಂದು ನಾವು ಇಬ್ಬರು ಹೇಳಿ ಸಹಿ ಮಾಡಿರುವುದಿಲ್ಲ ನಮ್ಮ ತಾಯಿ ಅಷ್ಟೇ ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6 ಎಕರೆ ಬಂದ ಜಮೀನನ್ನು ನನ್ನ ತಾಯಿ 11 ನೇ ಪ್ರತಿವಾದಿರವರಿಗೆ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ನಾನು, ಸರಸ್ವತಿ ಮತ್ತು ನನ್ನ ತಾಯಿ ಸೇರಿ ಎಲ್ಲಾರು ಹಂಚಿಕೊಂಡೆವು ಎಂದರೆ ಸರಿಯಲ್ಲ. ದಿನಾಂಕಃ 11.12.1987 ಮಾತುಕತೆ ಪ್ರಕಾರ ಶಿವಮ್ಮ, ಗವಿಸಿದ್ದಪ್ಪ ಮತ್ತು ಬಸವನಗೌಡರವರು ನನಗೆ ಮತ್ತು ನನ್ನ ತಂಗಿಗೆ ಹಣವನ್ನು ಕೊಟ್ಟರು ಎಂದರೆ ಸರಿಯಲ್ಲ. ಹನುಮಂತಪ್ಪರವರು ವಿಭಾಗ ಪತ್ರವನ್ನು ನಮ್ಮ ಹೇಳಿಕೆಯ ಪ್ರಕಾರ ಬರೆದಿರುತ್ತಾರೆ ಎಂದರೆ ಸರಿಯಲ್ಲ ವಿಭಾಗ ಪತ್ರಕ್ಕೆ ದೇವರೆಡ್ಡಿ , ಹೆಚ್.ಬಸವರಾಜ್, ಮಲ್ಲೇಶಪ್ಪ, ಮುಲ್ಲಂಗಿಚೆನ್ನಬಸಪ್ಪ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನಾವು

ಊರಲ್ಲೇ ಇರಲಿಲ್ಲ ಎಂದು ನುಡಿಯುತ್ತಾರೆ. ದೇವರೆಡ್ಡಿ ಬಿಟ್ಟರೇ ಮೂರು ಸಾಕ್ಷಿದಾರರು ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ನಿಮ್ಮ ತಿದ್ದುಪಡಿಯ/Amended ವಾದ ಪತ್ರದ ಪ್ಯಾರಾ ನಂಬರ್ 3 ಪೇಜ್ ನಂಬರ್.3, 5 ನೇ ಸಾಲಿನಲ್ಲಿ 1987 ರಲ್ಲಿ ನಿಮ್ಮ ತಾಯಿ ಮತ್ತು ಅಣ್ಣ-ತಮ್ಮಂದಿರ ನಡುವೆ ಮೌಖಿಕವಾಗಿ ವಿಭಾಗ ಆಗಿರುತ್ತದೆ ಮತ್ತು ಪ್ರತಿಯೊಬ್ಬರಿಗೆ 8 ಎಕರೆ ತಲಾ ಎಂದು ಹೋಗಿರುತ್ತದೆ ಎಂದರೆ ಬರೆದಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಸವನಗೌಡ, ಗವಿಸಿದ್ದಪ್ಪ ಮತ್ತು ಶಣಮುಕ್ಕಪ್ಪರವರ ಆಸ್ತಿಗಳನ್ನು ದಾವಾ ಹಾಕಿದ ನಂತರ ಕೆಐಎಡಿಬಿ ರವರು ಎನ್‌ಎಂಡಿಸಿ ಉದ್ದೇಶಕ್ಕಾಗಿ Acquire ಮಾಡಿದ್ದರು ಎಂದರೆ ಸಾಕ್ಷಿಯು ಕೇಸ್ ಇನ್ನು ಹಾಗೀಯೇ ಇದೆ ಎಂದು ನುಡಿಯುತ್ತಾರೆ. ಕೆಐಎಡಿಬಿ ರವರು ಬಸವನಗೌಡ, ಗವಿಸಿದ್ದಪ್ಪ ಮತ್ತು ಶಣಮುಕ್ಕಪ್ಪರವರಿಗೆ ಪ್ರತಿಯೊಬ್ಬರಿಗೆ ಪ್ರತಿ ಎಕರೆಗೆ 60 ರಿಂದ 70 ಲಕ್ಷ ರೂಪಾಯಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಹಣದಲ್ಲೇ ಬಸವನಗೌಡ, ಗವಿಸಿದ್ದಪ್ಪ ಮತ್ತು ಶಣಮುಕ್ಕಪ್ಪರವರು ನನಗೆ ಹಣವನ್ನು ಕೊಟ್ಟರು ಎಂದರೆ ಸಾಕ್ಷಿಯು ಇಷ್ಟು ಇಷ್ಟು ಕೊಟ್ಟರು ಎಂದು ನುಡಿಯುತ್ತಾರೆ. ಈ ದಾವೆ 2012 ರಲ್ಲಿ ಹಾಕಿದ್ದು ಈಗ ಭೂಮಿಯ ದರ ಏರಿರುತ್ತದೆ ಎಂದರೆ ಸರಿ. ಭೂಮಿಯ ದರ ಹೆಚ್ಚಾಗಿದ್ದರಿಂದ ನಾವು ಭಾಗ ಆಗಿ ಪಾಲು ತೆಗೆದುಕೊಂಡಿದ್ದರು ಸಹ ಬರಿ ಸಹಿ ಮಾಡಿರುವುದಿಲ್ಲ ಎಂಬ ಕಾರಣಕ್ಕೆ ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾ

ಆಸ್ತಿಯಲ್ಲಿ ನನಗೂ ಮತ್ತು ನನ್ನ ತಂಗಿಗೂ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 11.12.1987 ರಲ್ಲಿ ಆದ ವಿಭಾಗ ದಿನದಿಂದ ನಾಗೇಶಪ್ಪರವರು ಸರ್ವೇ ನಂಬರ್.258/1 ರ 7 ಎಕರೆ 56 ಸೆಂಟ್ಸ್ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾಗೇಶಪ್ಪರವರು ಮಾಲೀಕ ಆದ ನಂತರ ತನ್ನ ಮಗನಿಗೆ ದಿನಾಂಕಃ 12.10.2018 ರಂದು ದಾನ ಪತ್ರ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

**ಮರು ವಿಚಾರಣೆ ಇಲ್ಲ,**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**